**<u>ದಿನಾಂಕ: 11.07.2022 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಡಿ.ಜೆ.ಆರ್., ಪ್ರತಿವಾದಿ ಪರ ವಕೀಲರಿಂದ</u>**

2. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದ 2ನೇ ಖಂಡಿಕೆಯಲ್ಲಿ W.P. No.37061-62/2002 ನೇದ್ದನ್ನು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಜಮೀನಿನ ಮೂಲ ಮಾಲೀಕರು ಸಲ್ಲಿಸಿದ್ದರು ಅಂತ ಹೇಳಿ ಬರೆಸಿದ್ದು, ಅದನ್ನು ಯಾರು ಯಾರ ವಿರುದ್ಧ ಸಲ್ಲಿಸಿದ್ದರು ಅಂತ ನನಗೆ ಹೇಳಲು ಬರುವುದಿಲ್ಲ. ಸದರಿ W.P. No.37061-62/2002 ನೇದ್ದರಲ್ಲಿ ಪ್ರತಿವಾದಿ ಪಕ್ಷಗಾರರಾಗಿರಲಿಲ್ಲ.

3. ವ್ಯಾಜ್ಯದ ಜಮೀನು ಪಿ.ಟಿ.ಸಿ.ಎಲ್. ಕಾಯಿದೆ ಅಡಿಯಲ್ಲಿ ಬರುತ್ತದೆ ಎಂದು ಮಾನ್ಯ ಉಪವಿಭಾಧಿಕಾರಿಗಳ ನ್ಯಾಯಾಲಯ ಚಿತ್ರದುರ್ಗ ಇವರ ನ್ಯಾಯಾಲಯದಲ್ಲಿ ಪ್ರಕರಣ ನಡೆದಿರುತ್ತದೆ ಎಂದರೆ ಸರಿ. ಸದರಿ W.P. No.37061-62/2002 ನೇದ್ದರಲ್ಲಿ ಆದಂತಹ ಆದೇಶದ ಪ್ರಕಾರ ಜಮೀನಿನ ಮೂಲ ಮಾಲೀಕರಿಗೆ ಹಣವನ್ನು ಪಾವತಿ ಮಾಡಿಬೇಕೆಂದು ಆದೇಶವಾಗಿರುತ್ತದೆ ಎಂದರೆ ಸಾಕ್ಷಿಯು ಮುಂದುವರೆದು ನೋಟೀಸ್ ನಲ್ಲಿ ಹೆಸರು ಇರಲಿಲ್ಲ ಎಂದು ನುಡಿಯುತ್ತಾರೆ.



ಮೂಲ ಜಮೀನು ಮಂಜೂರಾಗಿರುವವರಿಗೆ ಹಣವನ್ನು ಪಾವತಿ ಮಾಡಬೇಕೆಂದು ಆಗಿರುವ ಆದೇಶದಲ್ಲಿ ನಾನು ಪಕ್ಷಗಾರನಾಗಿರಲಿಲ್ಲ. ಅದೇ ರೀತಿ ವಾದಿ ಮುರುಡಪ್ಪ ಸಹ ಪಕ್ಷಗಾರನಾಗಿರಲಿಲ್ಲ. W.P. No.37061-62/2002 ನೇದ್ದರಲ್ಲಿ ನಾನಗಲೀ ಅಥವಾ ವಾದಿ ಮುರಡಪ್ಪನಾಗಲೀ ಪಕ್ಷಗಾರನಾಗಿರಲಿಲ್ಲ.

4. W.P. No.37061-62/2002 ನೇದ್ದರಲ್ಲಿ ಏನು ಆದೇಶ ಆಗಿರುತ್ತದೆ ಅಂತ ನನಗೆ ಗೊತ್ತಿರುತ್ತದೆಯೇ ಎಂದರೆ ಸಾಕ್ಷಿಯು ಹಣ ಕಟ್ಟಬೇಕೆಂದು ಆದೇಶ ಆಗಿರುತ್ತದೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನೋಟೀಸ್ ತಲುಪದೇ ಇರುವ ಕಾರಣಕ್ಕೆ ನಾನು ಮತ್ತು ವಾದಿ ಮುರುಡಪ್ಪ ಜಮೀನಿನ ಮೂಲ ಮಾಲೀಕರಿಗೆ ಹಣ ಕಟ್ಟಿಲ್ಲ ಅಂತ ಹೇಳಿ ಬರೆಸಿರುವುದಿಲ್ಲ. ವಾದಿ ಮುರುಡಪ್ಪ ಮಾನ್ಯ ಉಚ್ಚ ನ್ಯಾಯಾಲಯದ ಆದೇಶದಂತೆ ನಿವೇಶನದ ಹಣವನ್ನು ಜಮೀನಿನ ಮೂಲ ಮಾಲೀಕರಿಗೆ ಪಾವತಿ ಮಾಡದೇ ಇರುವ ಕಾರಣಕ್ಕೆ ಅದನ್ನು ಮೂಲ ಮಾಲೀಕರ ಹೆಸರಿಗೆ ಖಾತೆ ಬದಲಾವಣೆ ಮಾಡಿರುತ್ತಾರೆ ಎಂದರೆ ಸರಿ. ಮೂಲ ಮಾಲೀಕರಿಗೆ ಹಣವನ್ನು ಪಾವತಿ ಮಾಡಿದ್ದರೇ ದಾವಾ ಸ್ವತ್ತು ಮೂಲ ಮಾಲೀಕರ ಹೆಸರಿಗೆ ಖಾತೆ ಆಗಿರುತ್ತಿರುಲಿಲ್ಲ ಎಂದರೆ ಸರಿ.

5. ದಾವಾ ಸ್ವತ್ತು ಮೂಲ ಮಾಲೀಕರ ಹೆಸರಿಗೆ ಖಾತೆಯಾದ ನಂತರ ಅದನ್ನು ಶ್ರೀಧರ್ ನಾಯ್ಕ ಎಂಬುವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯದಂತೆ ಶ್ರೀಧರ್ ನಾಯ್ಕನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಅದರಂತೆ ಅವರು ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿ. 2020 ನೇ ಇಸವಿಯಲ್ಲಿ ಸದರಿ ಶ್ರೀಧರ್ ನಾಯ್ಕ ಪ್ರತಿವಾದಿ ಶಾರದಮ್ಮ ಇವರಿಗೆ ಮಾರಾಟ ಮಾಡಿ ಸ್ವಾಧೀನಾನುಭವವನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ ಶಾರದಮ್ಮ ದಾವಾ ಸ್ವತ್ತಿನಲ್ಲಿ ಕೊರೆಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಆದ್ದರಿಂದ ವಾದಿಗೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ.

6. ಈ ದಾವೆಯಲ್ಲಿ ಶ್ರೀಧರ್ ನಾಯ್ಕ ಮತ್ತು ಮೂಲ ಜಮೀನಿನ ಮಂಜೂರುದಾರರನ್ನು ಪಕ್ಷಗಾರರಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾನು ಮತ್ತು ವಾದಿ ಮುರುಡಪ್ಪ ಸ್ನೇಹಿತರು ಎಂದರೆ ಸರಿ. ಆದ್ದರಿಂದ ವಾದಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.